# ಕನ್ನಡ ನುಡಿ

## ಅ) ಪದಗಳ ಅರ್ಥ :

**ಅರಿ** - ತಿಳಿ, ಗ್ರಹಿಸು

**ಆಲಿಸು** - ಮನಸ್ಸಿಟ್ಟು ಕೇಳು

**ಕಣಜ** - ಧಾನ್ಯ ಸಂಗ್ರಹಣ ಸ್ಥಳ

**ಚಿತ್ತ** - ಮನಸ್ಸು

**ತಿರುಳು** - ಸತ್ವ, ಸಾರ

**ನನ್ನಿ** - ಪ್ರೀತಿ, ಸತ್ಯ

**ಮಳಲು** - ಮರಳು

**ಅಮೃತ** - ಪವಿತ್ರವಾದುದು

**ಒಲುಮೆ** - ಪ್ರೀತಿ

**ಗುಡಿ** - ದೇವಾಲಯ

**ತಾಯಿನುಡಿ** - ಮಾತೃಭಾಷೆ

**ತೊರೆ** - ಚಿಕ್ಕಹೊಳೆ

**ನುಡಿ** - ಭಾಷೆ

## ಆ) 'ಅ' ಪಟ್ಟಿಯಿಂದ 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ:

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

| 'ಅ' ಪಟ್ಟಿ | 'ಬ' ಪಟ್ಟಿ | ಉತ್ತರ |
|---|---|---|
| ೧. ಪುಣ್ಯಕೋಟಿ | ಅ) ಕೀರ್ತನೆಗಳು | ಆ) ಗೋವು |
| ೨. ಹದಿಬದೆಯಧರ್ಮ | ಆ) ಗೋವು | ಈ) ಸಂಚಿಹೊನ್ನಮ್ಮ |
| ೩. ದಾಸರು | ಇ) ವಚನಗಳು | ಅ) ಕೀರ್ತನೆಗಳು |
| ೪. ಶರಣರು | ಈ) ಸಂಚಿಹೊನ್ನಮ್ಮ | ಇ) ವಚನಗಳು |
| | ಉ) ಹೃದಯದ ಒಲುಮೆ | |

## ಪ್ರಶ್ನೆಗಳು

### ೩) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

**೧) ಕವಿ ತನ್ನ ಮಾತುಗಳನ್ನು ಹೇಗೆ ಆಲಿಸಬೇಕೆಂದು ಮಕ್ಕಳಿಗೆ ಕರೆ ನೀಡಿದ್ದಾರೆ?**

**ಉ: ಕವಿ ತನ್ನ ಮಾತುಗಳನ್ನು ಚಿತ್ತವನಿಟ್ಟು ಆಲಿಸಬೇಕೆಂದು ಮಕ್ಕಳಿಗೆ ಕರೆ ನೀಡಿದ್ದಾರೆ.**

**೨) ಕನ್ನಡದ ನುಡಿಯಲ್ಲಿ ಏನು ತುಂಬಿದೆ?**

**ಉ: ಕನ್ನಡದ ನುಡಿಯಲ್ಲಿ ಹೃದಯದ ಒಲುಮೆಯು ತುಂಬಿದೆ.**

೩) ಜಾನಪದದಲ್ಲಿ ಮೂಡಿದ ಸತ್ಯದ ಬದುಕಿನ ಚರಿತ್ರೆ ಯಾವುದು?

ಉ: ಜಾನಪದದಲ್ಲಿ ಮೂಡಿದ ಸತ್ಯದ ಬದುಕಿನ ಚರಿತ್ರೆ ಪುಣ್ಯಕೋಟಿಯದು.

೪) ಹದಿಬದೆಯಧರ್ಮ ಗ್ರಂಥವನ್ನು ಬರೆದವರು ಯಾರು?

ಉ: ಹದಿಬದೆಯಧರ್ಮ ಗ್ರಂಥವನ್ನು ಬರೆದವರು ಸಂಚಿಹೊನ್ನಮ್ಮ.

೫) ಶರಣರು ರಚಿಸಿದ ಸಾಹಿತ್ಯ ಯಾವುದು?

ಉ: ಶರಣರು ರಚಿಸಿದ ಸಾಹಿತ್ಯ ವಚನಗಳು.

೬) ಕನ್ನಡದೊಲುಮೆಯ ಹವಳಗಳು ಯಾವುವು?

ಉ: ಕನ್ನಡದೊಲುಮೆಯ ಹವಳಗಳು ದಾಸರ ನುಡಿಗಳು.

೭) 'ಕನ್ನಡ ನುಡಿ' ಕವಿತೆಯನ್ನು ಬರೆದ ಕವಿಯ ಹೆಸರು ಏನು?

ಉ: 'ಕನ್ನಡ ನುಡಿ' ಕವಿತೆಯನ್ನು ಬರೆದ ಕವಿಯ ಹೆಸರು ಎ. ಕೆ. ರಾಮೇಶ್ವರ.

೪) ಕೆಳಗಿನ ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

I FOR KANNADA ಕನ್ನಡಕ್ಕಾಗಿ ಇಲ್ಲಿ ಬನ್ನಿ

೧) ಕನ್ನಡದ ನುಡಿಯಲ್ಲಿ ಏನೇನು ಅಡಗಿದೆ?

ಉ: ಕನ್ನಡದ ನುಡಿಯಲ್ಲಿ ಹೃದಯದ ಒಲುಮೆಯು ತುಂಬಿದೆ. ಹಾಲಿನ ತೊರೆಯು, ಸಕ್ಕರೆ ಮಳಲು ಮತ್ತು ಜೇನಿನ ಹನಿಯು ಅಡಗಿದೆ.

೨) ಪುಣ್ಯಕೋಟಿ ಕಥೆಯು ಏನನ್ನು ತಿಳಿಸುತ್ತದೆ?

ಉ: ಪುಣ್ಯಕೋಟಿ ಕಥೆಯು ಸತ್ಯದ ಬದುಕಿನ ಚರಿತೆಯನ್ನು ತಿಳಿಸುತ್ತದೆ.

೩) ಕವಿಯು ಶರಣರ ವಚನಗಳನ್ನು ಏನೆಂದು ಬಣ್ಣಿಸಿದ್ದಾರೆ?

ಉ: ಕವಿಯು ಶರಣರ ವಚನಗಳನ್ನು ಬದುಕಿನ ಅಮೃತ ಕಣಜಗಳು ಎಂದು ಬಣ್ಣಿಸಿದ್ದಾರೆ.

೪) ದಾಸಸಾಹಿತ್ಯವನ್ನು ಕವಿ ಯಾವ ರೀತಿ ಬಣ್ಣಿಸಿದ್ದಾರೆ?

ಉ: ದಾಸಸಾಹಿತ್ಯವನ್ನು ಕವಿ ಕನ್ನಡದೊಲುಮೆಯ ಹವಳಗಳು ಎಂದು ಬಣ್ಣಿಸಿದ್ದಾರೆ.

೫) 'ಮಕ್ಕಳೆ ಕನ್ನಡ ಕಲಿಯಿರಿ' ಎಂದು ಕವಿ ಏಕೆ ಒತ್ತಾಯಿಸುತ್ತಾರೆ?

ಉ: ಬದುಕಿನ ತಿರುಳನು ಅರಿಯಲು 'ಮಕ್ಕಳೆ ಕನ್ನಡ ಕಲಿಯಿರಿ' ಎಂದು ಕವಿ ಒತ್ತಾಯಿಸುತ್ತಾರೆ.

ಭಾಷಾಭ್ಯಾಸ:

ಅ) ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿರಿ.

೧) ಚಿತ್ತ : ನಾನು ಪಾಠವನ್ನು ಚಿತ್ತವನಿಟ್ಟು ಕೇಳುತ್ತೇನೆ.

೨) ಒಲುಮೆ: ನನಗೆ ಕನ್ನಡದ ಬಗ್ಗೆ ಒಲುಮೆ ಇದೆ.

೩) ಜನಪದ: ಯಕ್ಷಗಾನ ಕರ್ನಾಟಕದ ಜನಪದ ಕಲೆ.

೪) ಕಣಜ: ನನ್ನ ಅಜ್ಜನ ಮನೆಯಲ್ಲಿ ಕಣಜ ಕೊಠಡಿ ಇತ್ತು.

೫) ತಿರುಳು: ವಚನದಲ್ಲಿ ಬದುಕಿನ ತಿರುಳು ಇದೆ.

ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ.

೧) ಮೂಡು x ಮುಳುಗು

೨) ಧರ್ಮ x ಅಧರ್ಮ

೩) ಅರಳು x ಮುದುಡು / ಬಾಡು

I FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಇ) ಈ ನುಡಿಯಲ್ಲಿ ಗೆರೆ ಹಾಕಿದ ಪ್ರಾಸ ಪದಗಳನ್ನು ಹುಡುಕಿ ಜೋಡಿಸಿ ಬರೆಯಿರಿ.

ಕನ್ನಡ ನುಡಿಯಲಿ ಕನ್ನಡ ಗುಡಿಯಲಿ
ಹೃದಯದ ಒಲುಮೆಯು ತುಂಬಿಹುದು
ಹಾಲಿನ ತೊರೆಯು ಸಕ್ಕರೆ ಮಳಲು
ಜೇನಿನ ಹನಿಯು ಅಲ್ಲಿಹುದು

ಈ) ಕೆಳಗಿನ ವಾಕ್ಯಗಳಲ್ಲಿ ದೋಷಯುಕ್ತ ಪದಗಳನ್ನು ಸರಿಪಡಿಸಿ ಬರೆಯಿರಿ.

೧) ಕನ್ನಡ ಎಡೆಯಲಿ ಕನ್ನಡ ಗಡಿಯಲಿ ಹೃದಯದ ಒಲುಮೆ.

ಉ: ಕನ್ನಡ ನುಡಿಯಲಿ ಕನ್ನಡ ಗುಡಿಯಲಿ ಹೃದಯದ ಒಲುಮೆ.

೨) ಪಾಪಕೋಟಿಯ ಬದುಕಿನ ಚರಿತೆಯು ಜನಪದದಲ್ಲಿ ಮೂಡಿಹುದು.

ಉ: ಪುಣ್ಯಕೋಟಿಯ ಬದುಕಿನ ಚರಿತೆಯು ಜನಪದದಲ್ಲಿ ಮೂಡಿಹುದು.

೩) ಬನ್ನಿರಿ ಮಕ್ಕಳೆ ಕನ್ನಡ ಕುಡಿಯಿರಿ ಬದುಕಿನ ತಿರುಳನು ಅರಿಯುತ್ತ.

ಉ: ಬನ್ನಿರಿ ಮಕ್ಕಳೆ ಕನ್ನಡ ಕಲಿಯಿರಿ ಬದುಕಿನ ತಿರುಳನು ಅರಿಯುತ್ತ.

೪) ನಮ್ಮ್ಮಯ ನಾಡಿನ ಪುಣ್ಯದ ಬೀಡಿನ ನಿನ್ನಯ ಕಥೆಯನು ಬರೆಯುತ್ತ.

ಉ: ನಮ್ಮ್ಮಯ ನಾಡಿನ ಪುಣ್ಯದ ಬೀಡಿನ ನನ್ನಿಯ ಕಥೆಯನು ಬರೆಯುತ್ತ.

ಉ) ಈ ಪದಗಳನ್ನು ನಕಲು ಮಾಡಿ ಬರೆಯಿರಿ.

| | | | | | | |
|---|---|---|---|---|---|---|
| ಚಿತ್ತ | ಸಕ್ಕರೆ | ಪುಣ್ಯ | ಅಮೃತ | ನನ್ನಿ | ಹೃದಯ | ಒಲುಮೆ |
| ಚಿತ್ತ | ಸಕ್ಕರೆ | ಪುಣ್ಯ | ಅಮೃತ | ನನ್ನಿ | ಹೃದಯ | ಒಲುಮೆ |
| ಚಿತ್ತ | ಸಕ್ಕರೆ | ಪುಣ್ಯ | ಅಮೃತ | ನನ್ನಿ | ಹೃದಯ | ಒಲುಮೆ |

ಊ) ಈ ಪದಗಳಿಗೆ ಏಕವಚನದ ರೂಪ ಬರೆಯಿರಿ

| ಬಹುವಚನ | ಏಕವಚನ |
|---|---|
| ೧) ಗುಡಿಗಳು | ಗುಡಿ |
| ೨) ತೊರೆಗಳು | ತೊರೆ |
| ೩) ಶರಣರು | ಶರಣ |
| ೪) ಹವಳಗಳು | ಹವಳ |

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ